# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–7471/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 16/10/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಆವರ್ಸೆ ಗ್ರಾಮ ಹಾಗೂ 33ನೇ ಶಿರೂರು ಗ್ರಾಮದ ಜಮೀನಿನಲ್ಲಿರುವ ಕಲ್ಲು ಗಣಿಗಾರಿಕೆ ಸ್ಥಳದಲ್ಲಿ ಗುತ್ತಿಗೆದಾರರು ಅನಧಿಕೃತವಾಗಿ ಗಣಿಗಾರಿಕೆ ಮಾಡದಂತೆ ಅಗತ್ಯ ಕ್ರಮ ಜರುಗಿಸಿ, ಅಕ್ರಮ ಗಣಿಗಾರಿಕೆಗೆ ವಿಧಿಸಿರುವ ದಂಡವನ್ನು ವಸೂಲು ಮಾಡಲು ಅಗತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಕುರಿತು.

*****

1. ಶ್ರೀ ಸುರೇಂದ್ರ ನಾಯ್ಕ ಬಿನ್ ರಾಮನಾಯ್ಕ, ವಾಸ: ಆವರಸೆ ಗ್ರಾಮ ಮತ್ತು ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ರಜತಾದ್ರಿ, ಮಣಿಪಾಲ, ಉಡುಪಿ ಜಿಲ್ಲೆ ಇವರ ವಿರುದ್ಧ ದೂರು ಸಲ್ಲಿಸಿ ತನಿಖೆ ಕೈಗೊಳ್ಳಲು ಕೋರಿರುತ್ತಾರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ಅಕ್ರಮ ಗಣಿಗಾರಿಕೆ ಕುರಿತು ಆವರ್ಸೆ ಮತ್ತು 33ನೇ ಶಿರೂರು ಗ್ರಾಮದಲ್ಲಿ ಸುಮಾರು 22 ಎಕರೆ ದೊಡ್ಡ ಬಂಡೆಕಲ್ಲಿದ್ದು, ಈ ಎರಡೂ ಗ್ರಾಮಗಳಿಗೆ ಹೊಂದಿಕೊಂಡಿರುತ್ತದೆ. ಆವರ್ಸೆ ಗ್ರಾಮದ ಸರ್ವೆ ನಂ. 93/1 ರಲ್ಲಿ ಸುಮಾರು 8 ಎಕರೆಗಳು ವಿಸ್ತೀರ್ಣವಿದ್ದು, ಶಿರೂರು ಗ್ರಾಮದ ಸರ್ವೆ ನಂ. 121, 130, 174ರಲ್ಲಿ ಬಂಡೆಕಲ್ಲು ವ್ಯಾಪಿಸಿಕೊಂಡಿರುತ್ತದೆ. ಸದರಿ ಗಣಿಗಾರಿಕೆಯಲ್ಲಿ ಕಾನೂನು ಬಾಹಿರವಾಗಿ ಇಲೆಕ್ಟ್ರಿಕಲ್ ಡೈನಾಮೆಟ್ ಸರಣಿ ಸ್ಫೋಟ ನಡೆಸುತ್ತಿದ್ದು, ಗ್ರಾಮಸ್ಥರಿಗೆ ಹಾಗೂ ಜಾನುವಾರುಗಳಿಗೆ, ಮನೆಗಳಿಗೆ ಹಾನಿಯಾಗಿದ್ದು ಭೂ ಮತ್ತು ಗಣಿ ವಿಜ್ಞಾನ ಇಲಾಖೆ, ಉಡುಪಿ, ತಹಶೀಲ್ದಾರ್, ಬ್ರಹ್ಮಾವರ, ಗ್ರಾಮ ಪಂಚಾಯತ್ ಹೆಗ್ಗುಂಜೆ ಗಮನಕ್ಕೆ ದೂರನ್ನು ನೀಡಿದ್ದರೂ ಈ ತನಕ ಯಾವುದೇ ಕಾನೂನು ಕ್ರಮವನ್ನು ಕೈಗೊಳ್ಳಲಿಲ್ಲ. ಕಾನೂನು ಬಾಹಿರವಾಗಿ ನಡೆಯುತ್ತಿರುವ ಈ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸಿ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಂಡು ಇಲಾಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆಗಳು:-

ದೂರಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ವರದಿ ನೀಡಬೇಕಾದ್ದರಿಂದ ದಿನಾಂಕ: 19/02/2015 ರಂದು ಬೆಳಿಗ್ಗೆ 10:30 ಗಂಟೆಗೆ ವಿಶೇಷ ತಹಶೀಲ್ದಾರರು ಬ್ರಹ್ಮಾವರ, ಹಿರಿಯ ಭೂವಿಜ್ಞಾನಿ ಹಾಗೂ ಸಿಬ್ಬಂದಿಗಳು, ಆರಕ್ಷಕ ಉಪ ನಿರೀಕ್ಷಕರು, ಬ್ರಹ್ಮಾವರ ಮತ್ತು ಕೋಟಾ ಪೋಲೀಸ್ ಠಾಣೆ ಹಾಗೂ ಪೋಲೀಸ್ ಸಿಬ್ಬಂದಿಗಳು, ಸರ್ಕಾರಿ ತಾಲ್ಲೂಕು ಮೋಜಣಿದಾರರು, ಆವರ್ಸೆ ಗ್ರಾಮ ಹಾಗೂ 33ನೇ ಶಿರೂರು

ಗ್ರಾಮ ಲೆಕ್ಕಿಗರು, ಹೆಗ್ಗುಂಜೆ ಗ್ರಾಮ ಪಂಚಾಯತಿ ಅಧ್ಯಕ್ಷರು, ದೂರುದಾರರು ಕಲ್ಲು ಗಣಿ ಗುತ್ತಿಗೆದಾರರಾದ ಶ್ರೀ ಮಹೇಶ್ ಶೆಟ್ಟಿ ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ದೂರು ಅರ್ಜಿ ಪ್ರದೇಶವಾದ ಆವರ್ಸೆ ಗ್ರಾಮದ ಸರ್ವೆ ನಂ. 93/1 ಹಾಗೂ ಶಿರೂರು ಗ್ರಾಮದ ಸರ್ವೆ ನಂ. 121, 170 ಮತ್ತು 130/1ರ ಪ್ರದೇಶವನ್ನು ಜಂಟಿಯಾಗಿ ಸ್ಥಳ ಪರಿಶೀಲಿಸಲಾಯಿತು. ಎರಡು ಗ್ರಾಮಗಳಿಗೆ ಹೊಂದಿಕೊಂಡಂತೆ ಹರಡಿರುವ ಕಲ್ಲು ಬಂಡೆಯ ಮೇಲೆ ಎರಡು ಗ್ರಾಮಗಳ ಸರ್ವೆ ಸಂಖ್ಯೆ ಗಡಿ ಗುರುತನ್ನು ನಿಖರವಾಗಿ ಮೋಜಣಿ ಮಾಡಿ ಗುರುತಿಸಿ ಪೈಂಟ್‌ನಿಂದ ಬಣ್ಣ ಹಚ್ಚಿ ಬಾವುಟವನ್ನು ಸಹ ಇಡಲಾಗಿದೆ. ಎರಡು ಗ್ರಾಮಗಳ ಗ್ರಾಮಲೆಕ್ಕಿಗರು ಬಂಡೆಕಲ್ಲಿನ ಸುತ್ತಮುತ್ತ ಇರುವ ಮನೆಗಳ ಪಟ್ಟಿ ಮಾಡಿದ್ದು, ನಂತರ ಅವುಗಳನ್ನು ಜಿ.ಪಿ.ಎಸ್., ಮೂಲಕ ಅಳತೆ ಮಾಡಿದ್ದು, ಮನೆಯಿಂದ ಕಲ್ಲು ಗಣಿ ಗುತ್ತಿಗೆ ಪ್ರದೇಶಕ್ಕೆ ಇರುವ ದೂರವನ್ನು ಮತ್ತು ವಿಸ್ತೀರ್ಣವನ್ನು ಗುರುತಿಸಲಾಯಿತು. ಸದರಿ ಮನೆಗಳು ಕಲ್ಲು ಗಣಿ ಪ್ರದೇಶದಿಂದ 200 ಮೀಟರ್‌ಗಿಂತ ಹೆಚ್ಚಿನ ದೂರದಲ್ಲಿರುವುದು ಕಂಡುಬಂದಿರುತ್ತದೆ. ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿರುವ ಬಂಡೆಯಿಂದ ಸ್ವಲ್ಪ ದೂರದಲ್ಲಿ ಒಂದು ಸಣ್ಣ ಬೊಬ್ಬರ್ಯ ದೇವಸ್ಥಾನ ಇರುವುದನ್ನು ಗ್ರಾಮಸ್ಥರು ತೋರಿಸಿದ್ದು ಅಲ್ಲಿ ಬೆಳೆದಿದ್ದ ಸಣ್ಣ ಮರಗಳಿಗೆ ಗಂಟೆಗಳನ್ನು ಕಟ್ಟಿರುವುದು ಕಂಡುಬಂದಿರುತ್ತದೆ. ಎರಡು ಗ್ರಾಮಗಳ ಗಡಿ ಗುರುತುಗಳನ್ನು ಪ್ರತ್ಯೇಕ ಮಾಡಿದ್ದು, ಆವರ್ಸೆ ಗ್ರಾಮ ವ್ಯಾಪ್ತಿಗೆ ಬರುವ ಗುತ್ತಿಗೆ ಪ್ರದೇಶಕ್ಕೆ ತಾಗಿಕೊಂಡಂತೆ ಸರ್ವೆ ನಂ. 93/ಪಿ6 ರಲ್ಲಿ ರಾಮ ನಾಯ್ಕ್ ರವರಿಗೆ ಅಕ್ರಮ ಸಕ್ರಮದಲ್ಲಿ ಮಂಜೂರಾದ ಪಟ್ಟಾ ಜಮೀನು ಇರುತ್ತದೆ. ಇದನ್ನು ಮಹೇಶ್ ಶೆಟ್ಟಿ ರವರು ಖರೀದಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಜಮೀನಿನಲ್ಲಿ ಯಾವುದೇ ಕೃಷಿ ಅಭಿವೃದ್ಧಿ ಇರುವುದಿಲ್ಲ. ರಾಮ ನಾಯ್ಕ್ ರವರ ಮನೆಯ ಬಳಿ 2 ತಿಂಗಿನ ಮರ, ಗೇರು ಸಸಿಗಳು, ಒಂದು ಮಾವಿನ ಸಣ್ಣ ಮರ ಮತ್ತು ಎರಡು ಸಣ್ಣ ಹಲಸಿನ ಮರಗಳಿರುವುದು ಕಂಡುಬಂದಿರುತ್ತದೆ. ಸದರಿ ಕಲ್ಲು ಬಂಡೆ ಹಾಗೂ ಮನೆ ಮಧ್ಯದಲ್ಲಿ ಗಿಡ ಮರಗಳು ಇರುತ್ತದೆ. ಸದರಿ ಸಮಯದಲ್ಲಿ ಸ್ಥಳ ಮಹಜರು ಬರೆದಿದ್ದು, ಪಂಚಾಯತಿ ಅಧ್ಯಕ್ಷರು ಹಾಗೂ ದೂರು ಅರ್ಜಿದಾರರು ಸಹಿ ಹಾಕಲು ನಿರಾಕರಿಸಿರುತ್ತಾರೆ. ಉಡುಪಿ ತಾಲ್ಲೂಕು ಆವರ್ಸೆ

ಗ್ರಾಮದ ಸರ್ಕಾರಿ ಸರ್ವೆ ನಂ. 93/1 ರಲ್ಲಿ 1–00 ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗೆ ಶ್ರೀ ಮಹೇಶ್ ಶೆಟ್ಟಿ ರವರಿಗೆ ಕಲ್ಲು ಗಣಿ ಗುತ್ತಿಗೆ ಸಂಖ್ಯೆ: 18 ಅನ್ನು ದಿನಾಂಕ: 29/05/2007 ರಿಂದ ಅನ್ವಯವಾಗುವಂತೆ 5 ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರಾತಿ ನೀಡಲಾಗಿತ್ತು. ಕಲ್ಲು ಗಣಿ ಗುತ್ತಿಗೆ ನೀಡುವ ಮೊದಲು ನಿಯಮಾವಳಿಯಂತೆ ವಿಶೇಷ ತಹಶೀಲ್ದಾರರು ಬ್ರಹ್ಮಾವರ ಇವರಿಂದ ದಿನಾಂಕ: 13/03/2007 ರಂದು ಸದರಿ ಕಲ್ಲು ಗಣಿ ಪ್ರದೇಶಕ್ಕೆ ನಿರಾಕ್ಷೇಪಣಾ ಪತ್ರ ಪಡೆಯಲಾಗಿತ್ತು. ಕಲ್ಲು ಗಣಿ ಗುತ್ತಿಗೆಯ ಅವಧಿಯು ದಿನಾಂಕ: 28/05/2012 ರಂದು ಮುಕ್ತಾಯಗೊಂಡಿರುತ್ತದೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರಂತೆ ದಿನಾಂಕ: 23/01/2012 ರಂದು ಸದರಿ ಕಲ್ಲು ಗಣಿ ಗುತ್ತಿಗೆ ನವೀಕರಣಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಶೇಷ ತಹಶೀಲ್ದಾರರು ಬ್ರಹ್ಮಾವರ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಬಂದಿರುವುದಿಲ್ಲ. ಸದರಿ ಪ್ರದೇಶದಲ್ಲಿ ಕಲ್ಲು ಗಣಿ ಕೆಲಸವು ಸ್ಥಗಿತಗೊಂಡಿರುತ್ತದೆ ಎಂಬುದು ಜಂಟಿ ಸ್ಥಳ ಪರಿಶೀಲನಾ ಸಮಯದಲ್ಲಿ ಕಂಡುಬಂದಿರುತ್ತದೆ. ಈ ಹಿಂದೆ ಸದರಿಯವರು ಕಲ್ಲು ಗಣಿ ಪ್ರದೇಶದಲ್ಲಿ ಕಟ್ಟಡ ಕಲ್ಲಿನ ಸೈಜು ಕಲ್ಲುಗಳನ್ನು ಮಾತ್ರ ತೆಗೆಯುತ್ತಿದ್ದು, ಸ್ಫೋಟಕ ಬಳಸಿರುವುದು ಕಂಡುಬಂದಿರುವುದಿಲ್ಲ. ಸ್ಫೋಟಕ ಬಳಸಿದಲ್ಲಿ ಸೈಜು ಕಲ್ಲುಗಳನ್ನು ತೆಗೆಯಲು ಕಷ್ಟ ಸಾಧ್ಯವಾಗಿರುತ್ತದೆ. ಸದರಿ ವಿಷಯ ಜಂಟಿ ಸ್ಥಳ ಪರಿಶೀಲನೆ ಸಮಯದಲ್ಲಿ ಕಂಡುಬಂದಿರುತ್ತದೆ. ಸದರಿ ಕಲ್ಲು ಗಣಿ ಪ್ರದೇಶದ ಬಗ್ಗೆ ಡಬ್ಲ್ಯೂ.ಪಿ. ನಂ. 7591/2010 ಅರ್ಜಿ ಸಲ್ಲಿಸಿದ್ದು ಉಚ್ಛ ನ್ಯಾಯಾಲಯವು ದಿನಾಂಕ: 17/03/2011 ರಂದು ಆದೇಶ ನೀಡಿ, ಶ್ರೀ ಮಹೇಶ್ ಶೆಟ್ಟಿಯವರು ಸ್ಫೋಟಕ ಬಳಸದೇ ಸದರಿ ಸರ್ವೆ ನಂಬರ್‌ನಲ್ಲಿ ಕಲ್ಲು ಗಣಿ ನಡೆಸುವುದಾಗಿ ಒಪ್ಪಿರುವುದಕ್ಕೆ ಅರ್ಜಿಯನ್ನು ಇತ್ಯರ್ಥಪಡಿಸಿರುತ್ತಾರೆ. ಯಾವುದೇ ಕಲ್ಲು ಗಣಿ ಕೆಲಸ ನಡೆಯುತ್ತಿರುವುದು ಜಂಟಿ ಸ್ಥಳ ಪರಿಶೀಲನಾ ಸಮಯದಲ್ಲಿ ಕಂಡುಬಂದಿರುವುದಿಲ್ಲ. ಸದರಿ ಪ್ರದೇಶದಲ್ಲಿ ಇದುವರೆಗೂ ಕಲ್ಲು ಗಣಿ ಗುತ್ತಿಗೆ ನವೀಕರಣಗೊಂಡಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

4. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ಇವರ ತನಿಖಾ ವರದಿ ದಿನಾಂಕ: 27/02/2017:-

ದಿನಾಂಕ: 13/02/2017 ರಂದು ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿದ ಉಡುಪಿ ತಾಲ್ಲೂಕು ಆವರ್ಸೆ ಗ್ರಾಮದ ಸರ್ವೆ ನಂ. 93/1 ಮತ್ತು 33ನೇ ಶಿರೂರು ಗ್ರಾಮದ ಸರ್ವೆ ನಂ. 121, 130, 174ರಲ್ಲಿ ಎರಡು ಗ್ರಾಮಗಳಿಗೆ ಹೊಂದಿಕೊಂಡಂತೆ ಕಲ್ಲು ಬಂಡೆಯಲ್ಲಿ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ಪಿರ್ಯಾದುದಾರರ ಸಮಕ್ಷಮದಲ್ಲಿ ಬೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದಾಗ ಸದರಿ ಕಲ್ಲುಬಂಡೆಯಲ್ಲಿ ಕಲ್ಲು ಗಣಿ ಕೆಲಸ ಮಾಡುತ್ತಿರುವ ಕೆಲಸಗಾರರು ಯಾರೂ ಕಂಡುಬಂದಿರುವುದಿಲ್ಲ. ಕಲ್ಲು ಗಣಿಗಾರಿಕೆ ನಡೆಸಲು ಯಾವುದೇ ರೀತಿಯ ಪರವಾನಗಿಯನ್ನು ಪಂಚಾಯತ್ ನಿಂದ ಸ್ವೀಕರಿಸಲಾಗಿರುವುದಿಲ್ಲ. ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ರಜತಾದ್ರಿ ಮಣಿಪಾಲ, ಉಡುಪಿ ಜಿಲ್ಲೆ ಇವರಿಂದ ವರದಿಯನ್ನು ಪಡೆದುಕೊಳ್ಳಲಾಗಿರುತ್ತದೆ. ಶ್ರೀ ಮಹೇಶ್ ಶೆಟ್ಟಿಯವರು ಕಲ್ಲು ಗಣಿ ಗುತ್ತಿಗೆ ಅವಧಿ ಮುಗಿದ ನಂತರ ಅನಧಿಕೃತವಾಗಿ 250 ಮೆ.ಟನ್ ನಷ್ಟು ಕಲ್ಲುಗಣಿಗಾರಿಕೆ ನಡೆಸಿರುವುದಕ್ಕೆ ದಿನಾಂಕ: 10/07/2017 ರಂದು ರೂ.75,000/- ದಂಡ ಪಾವತಿಸಿರುತ್ತಾರೆ. ಶ್ರೀ ಸಂಕಯ್ಯ ಶೆಟ್ಟರವರ ನವೀಕರಣ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ಅನಧಿಕೃತವಾಗಿ 110 ಮೆ.ಟನ್‌ನಷ್ಟು ಕಲ್ಲು ಗಣಿಗಾರಿಕೆ ನಡೆಸಿರುವುದಕ್ಕೆ ದಿನಾಂಕ: 20/10/2015 ರಂದು ರೂ.39,600/- ದಂಡ ವಿಧಿಸಿ ನೋಟೀಸ್ ಜಾರಿ ಮಾಡಲಾಗಿದ್ದು, ಸದರಿಯವರು ದಂಡವನ್ನು ಪಾವತಿಸಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೂ ಅನಧಿಕೃತವಾಗಿ 55 ಮೆ.ಟನ್ ನಷ್ಟು ಕಟ್ಟಡ ಕಲ್ಲು ಗಣಿಗಾರಿಕೆ ನಡೆಸಿರುವುದಕ್ಕೆ ದಿನಾಂಕ: 21/02/2017 ರಂದು ರೂ.50,000/- ದಂಡ ವಿಧಿಸಿ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಶ್ರೀಮತಿ ಉಷಾ ಎಂ. ಶೆಟ್ಟಿ ರವರು ದಿನಾಂಕ: 20/02/2017 ರಂದು ಭೂ ವಿಜ್ಞಾನಿಯವರು ಸ್ಥಳ ಪರಿಶೀಲನೆ ಕೈಗೊಂಡ ಸಮಯದಲ್ಲಿ ಕಲ್ಲು ಗಣಿಗಾರಿಕೆ ನಡೆಸಿರುವುದಕ್ಕೆ ರೂ.63,000/- ದಂಡ ವಿಧಿಸಿ ದಿನಾಂಕ: 21/02/2016 ರಂದು ನೋಟಿಸ್ ಜಾರಿ ಮಾಡಲಾಗಿರುತ್ತದೆ. ದಿನಾಂಕ:

20/02/2017 ರಂದು ಪರಿಶೀಲನೆ ಸಮಯದಲ್ಲಿ ಮನೆಗಳಿಗೆ ಹಾನಿ ಉಂಟಾಗಿರುವುದು ಕಂಡುಬಂದಿರುವುದಿಲ್ಲ. ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದ ಮೇರೆಗೆ ಗಣಿ ಇಲಾಖಾ ಅಧಿಕಾರಿಯವರು ಸದರಿ ಪರವಾನಿಗೆದಾರರಿಗೆ ದಂಡ ವಿಧಿಸಿ ನೋಟೀಸ್ ಜಾರಿ ಮಾಡಿರುವುದು ಕಂಡುಬಂದಿರುತ್ತದೆ. ಸ್ಥಳ ಪರಿಶೀಲನೆಯ ಸಮಯ ಹಾಜರಿದ್ದ ಅರ್ಜಿದಾರರೂ ಕೂಡಾ ಸದರಿ ಪ್ರದೇಶದಲ್ಲಿ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಹಾಗೂ ಆಸು ಪಾಸಿನ ಮನೆಗಳಿಗೆ ಹಾನಿಯಾದ ಬಗ್ಗೆ ತಿಳಿಸಿರುವುದಿಲ್ಲವಾಗಿ ನಮೂದಿಸಿರುತ್ತಾರೆ.

5. ಸದರಿ ತನಿಖಾ ವರದಿ ಮತ್ತು ಆಕ್ಷೇಪಣೆಗಳಿಗೆ ಪ್ರತ್ಯುತ್ತರ ಸಲ್ಲಿಸಲು ಕಾಲಾವಕಾಶ ನೀಡಿದ್ದು ನೋಟೀಸು ಜಾರಿಯಾಗಿದ್ದರು ಫಿರ್ಯಾದುದಾರರು ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

6. ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರ ವರದಿ ದಿನಾಂಕ: 04/12/2018:-

ಆವರ್ಸೆ ಗ್ರಾಮ ಹಾಗೂ 33ನೇ ಶಿರೂರು ಗ್ರಾಮದ ಜಮೀನಿನಲ್ಲಿರುವ ಕಲ್ಲು ಗಣಿಗಾರಿಕೆ ಸ್ಥಳವನ್ನು ದಿನಾಂಕ: 20/08/2018 ರಂದು ತಹಶೀಲ್ದಾರರು, ಬ್ರಹ್ಮಾವರ, ಈ ಕಛೇರಿಯ ಭೂವಿಜ್ಞಾನಿಯವರು ಹಾಗೂ ಕಿರಿಯ ಅಭಿಯಂತರರು, ಬ್ರಹ್ಮಾವರ ತಾಲ್ಲೂಕು ಕೋಟ ಹೋಬಳಿಯ ರಾಜಸ್ವ ನಿರೀಕ್ಷಕರು, ಮೋಜಣಿದಾರರು ಮತ್ತು ಶಿರೂರು ಗ್ರಾಮದ ಗ್ರಾಮ ಕರಣಿಕರು ಹಾಗೂ ಶಿರೂರು ಗ್ರಾಮದ ಮೂರ್‌ಕೈ ಪ್ರದೇಶದಲ್ಲಿರುವ ಕಲ್ಲು ಗಣಿಗುತ್ತಿಗೆ ಸಂಖ್ಯೆ 415ರ ಗುತ್ತಿಗೆದಾರರ ಪತಿ ಇವರುಗಳ ಸಮ್ಮುಖದಲ್ಲಿ ಜಂಟಿ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ. ಶಿರೂರು ಗ್ರಾಮದ ಮೂರ್‌ಕೈ ಪ್ರದೇಶದ ಸರ್ವೆ ನಂ. 174/2, 121ರಲ್ಲಿ 2.00 ಎಕರೆ ಪ್ರದೇಶಕ್ಕೆ ಶ್ರೀಮತಿ ಉಷಾ ಇವರಿಗೆ ದಿನಾಂಕ: 19/01/2018 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ನೀಡಿದ್ದು ಸದರಿ ಪ್ರದೇಶದಲ್ಲಿ ಪ್ರಸ್ತುತ ಗಣಿಗಾರಿಕೆ ಕಾರ್ಯ

ನಿರ್ವಹಿಸುತ್ತಿದ್ದು, ಗಣಿಗಾರಿಕೆಗೆ ಸ್ಫೋಟಕ ಬಳಸಲು ದಿನಾಂಕ: 20/04/2017 ರ ಆದೇಶದನ್ವಯ ಸ್ಪೋಟಕ ಪರವಾನಿಗೆ ಪಡೆದಿದ್ದು, ಸದರಿ ಪರವಾನಿಗೆ ಅವಧಿಯು ದಿನಾಂಕ: 31/03/2022 ರವರೆಗೆ ಚಾಲ್ತಿಯಲ್ಲಿರುತ್ತದೆ.

ಆವರ್ಸೆ ಗ್ರಾಮದ ಸರ್ವೆ ನಂ. 93/1 ರಲ್ಲಿ 1.00 ಎಕರೆ ಪ್ರದೇಶಕ್ಕೆ ಶ್ರೀ ಮಹೇಶ್ ಶೆಟ್ಟಿ ಇವರಿಗೆ ದಿನಾಂಕ: 29/05/2007 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 28/05/2012 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಪ್ರದೇಶದಲ್ಲಿ ಪ್ರಸ್ತುತ ಗಣಿಗಾರಿಕೆ ಕಾರ್ಯವು ಸ್ಥಗಿತಗೊಂಡಿರುತ್ತದೆ.

ಆವರ್ಸೆ ಗ್ರಾಮದ ಸರ್ವೆ ನಂ. 93/1 ರಲ್ಲಿ 0.50 ಎಕರೆ ಪ್ರದೇಶಕ್ಕೆ ಶ್ರೀ ಮಹೇಶ್ ಶೆಟ್ಟಿ ಇವರಿಗೆ ದಿನಾಂಕ: 23/07/2001 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 22/07/2006 ರಂದು ಮುಕ್ತಾಯಗೊಂಡಿರುತ್ತದೆ ಹಾಗೂ ಸದರಿ ಸರ್ವೆ ನಂ. 93/1 0.50 ಎಕರೆ ಪ್ರದೇಶಕ್ಕೆ ಶ್ರೀ ಗೋಪಾಲಕೃಷ್ಣ ನಾಯಕ್ ಇವರಿಗೆ ದಿನಾಂಕ: 23/07/2001 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 22/07/2006 ರಂದು ಮುಕ್ತಾಯಗೊಂಡಿರುತ್ತದೆ. ಪ್ರಸ್ತುತ ಸದರಿ ಪ್ರದೇಶದಲ್ಲಿ ಗಣಿಗಾರಿಕೆ ಕಾರ್ಯವು ಸ್ಥಗಿತಗೊಂಡಿರುತ್ತದೆ.

ಆವರ್ಸೆ ಗ್ರಾಮದ ಸರ್ವೆ ನಂ. 82/1ಪಿ1 ರಲ್ಲಿ 0.50 ಎಕರೆ ಪ್ರದೇಶಕ್ಕೆ ಶ್ರೀ ವಿಜಯಶೆಟ್ಟಿ ಇವರಿಗೆ ದಿನಾಂಕ: 28/08/2008 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 27/08/2013 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಪ್ರದೇಶದಲ್ಲಿ ಪ್ರಸ್ತುತ ಗಣಿಗಾರಿಕೆ ಕಾರ್ಯವು ಸ್ಥಗಿತಗೊಂಡಿರುತ್ತದೆ. 33ನೇ ಶಿರೂರು ಗ್ರಾಮದ ಸರ್ವೆ ನಂ. 130/1ರಲ್ಲಿ 1.30 ಎಕರೆ ಪ್ರದೇಶಕ್ಕೆ ಶ್ರೀ ಗಣಪತಿ ಶೆಟ್ಟಿ ಇವರಿಗೆ

ದಿನಾಂಕ: 06/08/2010 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 05/08/2015 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಪ್ರದೇಶದಲ್ಲಿ ಪ್ರಸ್ತುತ ಗಣಿಗಾರಿಕೆ ಕಾರ್ಯವು ಸ್ಥಗಿತಗೊಂಡಿರುತ್ತದೆ.

33ನೇ ಶಿರೂರು ಗ್ರಾಮದ ಸರ್ವೆ ನಂ. 130/1ರಲ್ಲಿ 1.00 ಎಕರೆ ಪ್ರದೇಶಕ್ಕೆ ಶ್ರೀ ಸಂಕಯ್ಯ ಶೆಟ್ಟಿ.ವೈ ಇವರಿಗೆ ದಿನಾಂಕ: 11/03/1997 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ದಿನಾಂಕ: 10/03/2001 ರಂದು ಮುಕ್ತಾಯಗೊಂಡಿರುತ್ತದೆ ಹಾಗೂ ಸದರಿ ಗ್ರಾಮದ ಸರ್ವೆ ನಂ. 130/1ರಲ್ಲಿ 1.00 ಎಕರೆ ಪ್ರದೇಶಕ್ಕೆ ಶ್ರೀ ಸಂಕಯ್ಯ ಶೆಟ್ಟಿ.ವೈ ಇವರಿಗೆ ದಿನಾಂಕ: 23/07/2002 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಕಲ್ಲು ಗಣಿಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುತ್ತದೆ. ಸದರಿ ಪ್ರದೇಶದಲ್ಲಿ ಪ್ರಸ್ತುತ ಗಣಿಗಾರಿಕೆ ಕಾರ್ಯವು ಸ್ಥಗಿತಗೊಂಡಿರುತ್ತದೆ.

ಶಿರೂರು ಗ್ರಾಮದ ಸರ್ವೆ ನಂ. 130/1ಪಿ1 ರಲ್ಲಿ 0.70 ಸೆಂಟ್ಸ್ ಪ್ರದೇಶಕ್ಕೆ ಶ್ರೀ ಜಯಪ್ರಕಾಶ್ ಶೆಟ್ಟಿ, ಇವರಿಗೆ ದಿನಾಂಕ: 06/08/2010 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ಮಾಡಲಾಗಿರುತ್ತದೆ. ಪ್ರಸ್ತುತ ಕಲ್ಲು ಗಣಿಗುತ್ತಿಗೆ ಕಾರ್ಯವು ಚಾಲ್ತಿಯಲ್ಲಿರುತ್ತದೆ. ಸರ್ವೆ ನಂ. 130/1ಪಿ1 ರಲ್ಲಿ 0.70 ಸೆಂಟ್ಸ್ ಪ್ರದೇಶಕ್ಕೆ ಶ್ರೀ ಭುಜಂಗ ಶೆಟ್ಟಿ, ಇವರಿಗೆ ದಿನಾಂಕ: 21/02/2017 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ಮಾಡಲಾಗಿರುತ್ತದೆ. ಪ್ರಸ್ತುತ ಕಲ್ಲು ಗಣಿಗುತ್ತಿಗೆ ಕಾರ್ಯವು ಚಾಲ್ತಿಯಲ್ಲಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

7. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

8. ಆವರ್ಸೆ ಗ್ರಾಮದ ಸರ್ವೆ ನಂ. 93/1 ಹಾಗೂ ಶಿರೂರು ಗ್ರಾಮದ ಸರ್ವೆ ನಂ. 121, 170, ಮತ್ತು 130/1 ರ ಪ್ರದೇಶದಲ್ಲಿರುವ ಕಲ್ಲು ಗಣಿ ಗುತ್ತಿಗೆ ಪ್ರದೇಶದಿಂದ ಮನೆಗಳಿರುವ ಪ್ರದೇಶದ ದೂರವನ್ನು ತನಿಖಾಧಿಕಾರಿಗಳು ಅಳತೆ ಮಾಡಿದ್ದು 200 ಮೀಟರ್ ಗಿಂತ ಹೆಚ್ಚಿನ ಅಂತರವಿರುವುದು ಕಂಡುಬಂದಿರುತ್ತದೆ.

9. ದೂರಿನ ಆರೋಪಗಳ ಬಗ್ಗೆ ಉಚ್ಛ ನ್ಯಾಯಾಲಯದಲ್ಲಿ W.P. 7591/10 ಸಲ್ಲಿಸಿದ್ದು ಉಚ್ಛ ನ್ಯಾಯಾಲಯದ ಮುಂದೆ ಗುತ್ತಿಗೆದಾರರಾದ ಮಹೇಶ್ ಶೆಟ್ಟಿ ಯವರು ದಿನಾಂಕ: 17/03/2011 ರಂದು ಸ್ಫೋಟಕವನ್ನು ಬಳಸದೇ ಕಲ್ಲುಗಣಿ ನಡೆಸುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಸದರಿ ಪ್ರಮಾಣ ಪತ್ರವನ್ನು ಪರಿಗಣಿಸಿ W.P. ಅರ್ಜಿಯನ್ನು ದಿನಾಂಕ: 17/03/2011 ರಂದು ಇತರ್ಥ ಪಡಿಸಲಾಗಿರುತ್ತದೆ.

10. ತನಿಖಾಧಿಕಾರಿಗಳು ನಡೆಸಿದ ಸ್ಥಳ ಪರಿಶೀಲನೆ ಸಮಯದಲ್ಲಿ ಗಣಿಗಾರಿಕೆಗೆ ಸ್ಫೋಟಕ ಬಳಸಿದ ಬಗ್ಗೆ ಕಂಡುಬಂದಿರುವುದಿಲ್ಲ ಹಾಗೂ ಗಣಿ ಪ್ರದೇಶದ ಹತ್ತಿರದ ಮನೆಗಳಿಗೆ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ.

11. ಗುತ್ತಿಗೆ ಅವಧಿ ಮುಗಿದ ನಂತರ ಗುತ್ತಿಗೆದಾರರು ಅನಧಿಕೃತ ಕಲ್ಲು ಗಣಿಗಾರಿಕೆ ನಡೆಸಿದ್ದಕ್ಕೆ ಕ್ರಮ ಜರುಗಿಸಿ ಶ್ರೀ ಮಹೇಶ್ ಶೆಟ್ಟಿಯವರಿಂದ ದಿನಾಂಕ: 10/07/2017 ರಂದು 75,000/- ದಂಡವನ್ನು, ಶ್ರೀ ಸುಂಕಯ್ಯ ಶೆಟ್ಟಿಯವರಿಂದ ದಿನಾಂಕ: 20/10/2015 ರಂದು 39,600/- ರೂ. ದಂಡವನ್ನು

ಹಾಗೂ ದಿನಾಂಕ: 21/02/2017 ರಂದು 50,000/- ದಂಡವನ್ನು, ಶ್ರೀಮತಿ ಉಷಾ ಎಂ. ಶೆಟ್ಟಿರವರಿಂದ ದಿನಾಂಕ: 20/02/2017 ರಂದು 63,000/- ದಂಡವನ್ನು ವಿಧಿಸಿ ನೋಟೀಸು ನೀಡಿರುವುದು ಕಂಡುಬಂದಿರುತ್ತದೆ. ಪಿರ್ಯಾದುದಾರರು ದೂರು ದಾಖಲಿಸಿದ ನಂತರವೂ ಅಕ್ರಮ ಗಣಿಗಾರಿಕೆ ಮಾಡಿರುವುದು ತನಿಖಾಧಿಕಾರಿಗಳು ಸಲ್ಲಿಸಿದ ವರದಿಯಿಂದ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

12. ಶಿರೂರು ಗ್ರಾಮದ ಮೂರ್ಕೈ ಪ್ರದೇಶದ ಸರ್ವೆ ನಂ. 174/2, 121 ರಲ್ಲಿ ಎರಡು ಎಕರೆ ಪ್ರದೇಶಕ್ಕೆ ದಿನಾಂಕ: 19/01/2018 ರಿಂದ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಪರವಾನಗಿ ನೀಡಿ ಸ್ಫೋಟಕ ಪರವಾನಗಿಯನ್ನು 31/03/2022 ರವರೆಗೆ ನೀಡಿರುವುದು ಕಂಡುಬಂದಿರುತ್ತದೆ.

13. ಶಿರೂರು ಗ್ರಾಮದ ಸರ್ವೆ ನಂ. 130/1ಪಿ1 ರಲ್ಲಿ 70 ಸೆಂಟ್ಸ್ ಪ್ರದೇಶಕ್ಕೆ ದಿನಾಂಕ: 06/08/2010 ರಿಂದ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರು ಮಾಡಿದ್ದು ಗುತ್ತಿಗೆ ಕಾರ್ಯವು ಚಾಲ್ತಿಯಲ್ಲಿರುವುದು ಕಂಡುಬಂದಿರುತ್ತದೆ. ಇದೆ ಸರ್ವೆ ನಂ. ನಲ್ಲಿರುವ 70 ಸೆಂಟ್ಸ್ ಪ್ರದೇಶಕ್ಕೆ ದಿನಾಂಕ: 21/02/2017 ರಿಂದ 20 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರು ಮಾಡಿದ್ದು ಗಣಿಗುತ್ತಿಗೆ ಕಾರ್ಯವು ಚಾಲ್ತಿಯಲ್ಲಿರುತ್ತದೆ.

14. ಗುತ್ತಿಗೆದಾರರು ಗುತ್ತಿಗೆ ಅವಧಿ ಮುಗಿದ ನಂತರ ಅಕ್ರಮವಾಗಿ ಗಣಿಗಾರಿಕೆ ನಡೆಸಿದ್ದಕ್ಕೆ ಗುತ್ತಿಗೆದಾರರಿಗೆ ದಂಡ ವಿಧಿಸಿ ನೋಟೀಸು ನೀಡಿರುವುದು ತನಿಖೆಯಲ್ಲಿ ಕಂಡುಬಂದಿದ್ದು ದಂಡ ವಸೂಲು ಮಾಡಿದ ಬಗ್ಗೆ ಮಾಹಿತಿ ಮತ್ತು ಆಧಾರಗಳನ್ನು ತನಿಖಾಧಿಕಾರಿಗಳು ಸಲ್ಲಿಸಿರುವುದಿಲ್ಲ.

15. ಆವರ್ಸೆ ಗ್ರಾಮ ಹಾಗೂ 33ನೇ ಶಿರೂರು ಗ್ರಾಮದ ಜಮೀನಿನಲ್ಲಿರುವ ಕಲ್ಲು ಗಣಿಗಾರಿಕೆ ಸ್ಥಳದಲ್ಲಿ ಗುತ್ತಿಗೆದಾರರು ಅನಧಿಕೃತವಾಗಿ ಗಣಿಗಾರಿಕೆ ಮಾಡದಂತೆ ಅಗತ್ಯ ಕ್ರಮ ಜರುಗಿಸಿ, ಅಕ್ರಮ ಗಣಿಗಾರಿಕೆಗೆ ವಿಧಿಸಿರುವ ದಂಡವನ್ನು ವಸೂಲು ಮಾಡಲು ಅಗತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/10.

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**